

ಚಿತ್ರ: ಶಶಿಧರ ಹಳೇಮನಿ

# ಚಿನ್ನದ ನಾಣ್ಯಗಳ ಚೀಲ

ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದ ಕೃಷ್ಣ ದೇವರಾಯನು ಮತ್ತು ದೆಹಲಿಯನ್ನು ಆಳುತ್ತಿದ್ದ ಮೊಘಲರ ದೊರೆಯಾದ ಬಾಬರ್ ಇಬ್ಬರೂ ಸಮಕಾಲೀನ ದೊರೆಗಳಾಗಿದ್ದರು. ಹೀಗಿರುವಾಗ ಬಾಬರನಿಗೆ ಕೃಷ್ಣ ದೇವರಾಯನ ಆಸ್ಥಾದಲ್ಲಿದ್ದ ತೆನಾಲಿರಾಮನ ಚಾತುರ್ಯ, ಹಾಸ್ಯ ಮತ್ತು ಅವನಲ್ಲಿರುವ ಬುದ್ಧಿವಂತಿಕೆ ಬಗ್ಗೆ ತನ್ನ ರಾಜ್ಯದ ಜನರು ಮಾತನಾಡಿಕೊಳ್ಳುತ್ತಿರುವುದು ಅವನ ಕಿವಿಗೂ ಬಿದ್ದಿತು. ಕೃಷ್ಣದೇವರಾಯನ ಅಸ್ಥಾನದಲ್ಲಿ ವಿದೂಷಕನಾಗಿದ್ದ ತೆನಾಲಿರಾಮನನ್ನು ನೋಡುವ ಬಯಕೆ ಬಾಬರನಿಗೆ ಹೆಚ್ಚಾಯಿತು. ಬಾಬರನು ತೆನಾಲಿರಾಮನನ್ನು ತಮ್ಮ ರಾಜ್ಯಕ್ಕೆ ಕಳುಹಿಸಿ ಕೊಡುವಂತೆ ಪತ್ರದ ಮೂಲಕ ಕೃಷ್ಣ ದೇವರಾಯನಿಗೆ ವಿನಂತಿಸಿದನು.

ಬಾಬರನ ಪತ್ರವನ್ನು ಓದಿದ ಕೃಷ್ಣದೇವರಾಯನಿಗೆ ತೆನಾಲಿರಾಮನ ಬಗ್ಗೆ ಹೆಮ್ಮೆ ಅನ್ನಿಸಿತು.

'ತೆನಾಲಿರಾಮ, ನೀನು ವಿಜಯನಗರ ಸಾಮ್ರಾಜ್ಯಕ್ಕೆ ಕೀರ್ತಿ ತಂದಿದ್ದೀಯೆ. ಮೊಗಲರ ರಾಜ್ಯದ ಚಕ್ರವರ್ತಿಯಾದ ಬಾಬರನು ನನಗೆ ಪತ್ರವನ್ನು ಬರೆದು ನಿನ್ನನ್ನು ದೆಹಲಿಗೆ ಕಳುಹಿಸಿ ಕೊಡಬೇಕಾಗಿ ವಿನಂತಿಸಿ ಕೊಂಡಿದ್ದಾನೆ. ಹೊರಡಲು ಸಿದ್ಧನಾಗು. ಆದರೆ ನೀನು 'ವಿಕಟಕವಿ' ಎಂಬುದನ್ನು ಮರೆಯಬೇಡ.ನೀನು ವಾಪಸ್ಸು ಮರಳುವಾಗ ಬಾಬರನಿಂದ ಒಂದು ಚೀಲ ಚಿನ್ನದ ನಾಣ್ಯಗಳನ್ನು ಬಹುಮಾನವಾಗಿ ಪಡೆದು ಕೊಂಡು ಬರಬೇಕು' ಎಂದನು ಕೃಷ್ಣದೇವರಾಯ.

ತೆನಾಲಿರಾಮನು ಕೃಷ್ಣದೇವರಾಯನ ಇಚ್ಛೆಯನ್ನು ಈಡೇರಿಸಲು ಬಹುನಿರೀಕ್ಷೆಯನ್ನು ಇಟ್ಟುಕೊಂಡು ದೆಹಲಿಗೆ ಪ್ರಯಾಣ ಹೊರಟನು.

ಇತ್ತ ಬಾಬರನು ತನ್ನ ರಾಜ್ಯದ ಸಭೀಕರನ್ನು ಕರೆದು 'ತೆನಾಲಿರಾಮನು ಎಂತಹ ತಮಾಷೆಯ ಮಾತುಗಳನ್ನಾಡಿರೂ ನೀವು ಯಾರೊಬ್ಬರೂ ಅವನ ಮಾತುಗಳನ್ನು ಕೇಳಿ ನಗಬಾರದು, ಎಲ್ಲಿಯಾದರೂ ನನ್ನ ಮಾತಿಗೆ ವಿರುದ್ಧವಾಗಿ ನೀವು ನಕ್ಕರೆ ನಿಮಗೆ ತಕ್ಕ ಶಿಕ್ಷೆಯನ್ನು ವಿಧಿಸಲಾಗುತ್ತದೆ' ಎಂದು ಕಟ್ಟಪ್ಪಣೆ ಮಾಡಿದನು.

ತೆನಾಲಿರಾಮನು ದೆಹಲಿಗೆ ಬಂದಾಗ ಬಾಬರನ ಕಡೆಯವರು ಅವನನ್ನು ಆದರದಿಂದ ಸ್ವಾಗತ ಮಾಡಿ ಅರಮನೆಗೆ ಬರ ಮಾಡಿಕೊಂಡರು. ಕೃಷ್ಣದೇವರಾಯನು ತೆನಾಲಿರಾಮನಲ್ಲಿ ಬಾಬರನಿಗೆ ಉಡುಗೊರೆಯನ್ನು ಕಳುಹಿಸಿ ಕೊಟ್ಟಿದ್ದನು. ಅದನ್ನು ಬಾಬರನಿಗೆ ತಲುಪಿಸಿದನು.

ತೆನಾಲಿರಾಮನು ತನ್ನ ಪ್ರಯಾಣದ ಸಮಯದಲ್ಲಿ ನಡೆದ ಅನುಭವಗಳ ಕುರಿತು ವಿನೋದದಿಂದ ಸಭಿಕರ ಮುಂದೆ ಬಣ್ಣಿಸಿದನು. ಅದರೆ ತೆನಾಲಿರಾಮನ ವಿನೋದದ ಮಾತುಗಳನ್ನು ಕೇಳಿ ಯಾರೊಬ್ಬರೂ ನಗಲೇ ಇಲ್ಲ. ಸಭೆಯಲ್ಲಿದ್ದವರೆಲ್ಲರೂ ಜೀವವಿಲ್ಲದ ಬೊಂಬೆಗಳಂತೆ ಕುಳಿತು ಕೊಂಡಿದ್ದರು. ಇವನ ಮಾತುಗಳಿಗೆ ಒಂದು ಮುಗುಳ್ನಗೆ ಸಹ ಸೂಸಲಿಲ್ಲ. ಇದರಿಂದ ಅವನಿಗೆ ಏನೂ ಮಾಡಲು ತೋಚದೆ ಬೇಸರವಾಯಿತು.

ತೆನಾಲಿರಾಮನು ತನ್ನ ದೊರೆಯಾದ ಕೃಷ್ಣ ದೇವರಾಯನಿಗೆ ಕೊಟ್ಟ ಮಾತನ್ನು ಉಳಿಸಿ ಕೊಳ್ಳಲೇಬೇಕಿತ್ತು. ಅದಕ್ಕೆ ಏನಾದರೊಂದು ಪರಿಹಾರ ಹುಡುಕಲೇಬೇಕೆಂದುಕೊಂಡ. ಇಲ್ಲವಾದರೆ ದೊರೆಗಳು ಬೇಸರ ಪಡುತ್ತಾರೆ. ವಾಪಸ್ಸು ಇಲ್ಲಿಂದ ಬರುವಾಗ ಒಂದು ಚೀಲ ಚಿನ್ನದ ನಾಣ್ಯಗಳನ್ನು ತೆಗೆದುಕೊಂಡು ಬರಬೇಕೆಂದು ಹೇಳಿದ್ದಾರೆ. ಅದರೆ ಅದು ಸಾಧ್ಯವಾಗುತ್ತಿಲ್ಲ. ಹೇಗಾದರೂ ಮಾಡಿ ಇದಕ್ಕೊಂದು ಉಪಾಯ ಮಾಡಲೇಬೇಕೆಂದುಕೊಂಡನು.